ಹಾಡುಗಾರ ಹೋರಾಟಗಾರ ಪ್ರಶಾಂತನ ಕರೆ ಬಂದಿತ್ತು. ಈ ಪ್ರಶಾಂತನಾದರೂ ಇವತ್ತಿನ ಕಾಲಕ್ಕೆ ತಕ್ಕಂತೆ ಅಂಬೇಡ್ಕರರನ್ನು ಟೈಲರ, ಭಸ್ಮಾಸುರ, ಅಂಗುಲಿಮಾಲ ಎಂದು ಹಾಡು ಬರೆದು ಎಲ್ಲರೂ ನಿಬ್ಬೆರಗಾಗುವಂತೆ ಮಾಡಿದ್ದ. ಕರೆ ಸ್ವೀಕರಿಸಿದ ನಟ, 'ಹೇಗಿದಿಯ ಪ್ರಶಾಂತ್, ಎಲ್ಲಿದಿಯ' ಎನ್ನಲು, 'ಅದೆಲ್ಲ ಬಿಡು, ನಾವು ಇವತ್ತು ರಾತ್ರಿಯೇ ಫ್ರೀಡಂ ಪಾರ್ಕಿಗೆ ಧಾವಿಸುತ್ತಿದ್ದೇವೆ. ನಿನ್ನ ಹಾಸ್ಟೆಲ್ ಗೆಳೆಯರನ್ನು ಕರ್ಕಂಡು ಬಂದು ರಾತ್ರಿಯೇ ನಮ್ಮೊಂದಿಗೆ ಸೇರಿಕೊಳ್ಳಬೇಕು, ಇಲ್ಲಿ ತುಂಬ ಕೆಲಸವಿದೆ' ಎಂದು ಶರಾ ಬರೆದು ಫೋನ್ ಕಟ್ ಮಾಡಿದ. ನಟ ಇನ್ನೂ ಗೊಂದಲಕ್ಕೆ ಬಿದ್ದ.

ಹಾಸ್ಟೆಲ್‌ನ ನೂರಾರು ಗೆಳೆಯರು ನಟನ ಬಳಿ ಬಂದು, 'ಬಾ ಗುರು, ನೀನೇ ಇಲ್ಲ ಅಂದ್ರೆ ಹೆಂಗೆ' ಎಂದು ಮರು ಯೋಚಿಸಲು ಅವಕಾಶವಿಲ್ಲದಂತೆ ಅವನನ್ನು ಕರೆದುಕೊಂಡು ರಾತ್ರಿಯೇ ಫ್ರೀಡಂ ಪಾರ್ಕ್ ತಲುಪಿದರು. ನಟ ಅಲ್ಲಿ ನಾಳೆ ಸೇರುವ ಲಕ್ಷಾಂತರ ಜನರ ಊಟ, ತಿಂಡಿ, ಬಾವುಟ, ಬ್ಯಾನರ್, ಹೋರಾಟದ ಹಾಡುಗಳೊಳಗೆ ಕಳೆದುಹೋದ.

'ನಾಳೆ ನಂದಿ ಬೆಟ್ಟಕ್ಕೆ ಬರಲು ಕಷ್ಟವಾಗುತ್ತಿದೆ' ಎಂಬುದೊಂದು ಮೆಸೇಜನ್ನು ಆ ಅವಸರದಲ್ಲೂ ನಟ ಆಕೆಗೆ ಸೆಂಡ್ ಮಾಡಿದ್ದ. ಆಕೆಯಿಂದ ಬಂದ 'ಓಕೆ ಕ್ಯಾರಿ ಆನ್' ಎಂಬ ಮೆಸೇಜ್ ನಟನಿಗೆ ಸಮಾಧಾನ ಕೊಟ್ಟಿತಾದರೂ, ಇನ್ನೆಂದೂ ಇಂಥ ಅವಕಾಶ ಸಿಗುವುದಿಲ್ಲವೆಂಬ ಖಾತ್ರಿಯೂ ಸಿಕ್ಕಿತ್ತು.

ಇದಾದ ನಂತರ ನಾಳಿನ ಸ್ಟ್ರೈಕ್‌ನಲ್ಲಿ ನಟ ಮೈಮರೆತು ಪಾಲ್ಗೊಂಡಿದ್ದ. ಚೈತನ್ಯ ಯಾತ್ರೆಯ ದೊಡ್ಡ ಬಸ್ ಮೇಲೆ ಹತ್ತಿ ತೊಟ್ಟಿದ್ದ ಅಂಗಿ ಬಿಚ್ಚಿ ತಿರುಗಿಸಿದ್ದ. ಅದೇ ಫೋಟೊ ಇಂದು ಪತ್ರಿಕೆಯಲ್ಲಿ ದೊಡ್ಡದಾಗಿ ಪ್ರಕಟವಾಗಿತ್ತು. ಯಾವ ಸುದ್ದಿಗಳು ನನ್ನನ್ನು ಮತ್ತೆ ಪ್ರಚಾರಕ್ಕೆ ತಂದುಬಿಡುತ್ತವೆ, ಇದರಿಂದ ನನ್ನ ಓದಿಗೆಲ್ಲಿ ಅಡಚಣೆಯಾಗಿಬಿಡುತ್ತದೋ ಎಂದು ಸ್ವತಃ ಸಾಮಾಜಿಕ ಜಾಲತಾಣಗಳಿಂದಲೂ ದೂರ ಉಳಿದಿದ್ದನೋ ಆ ನಟ, ಲಲಿತಾಳೊಂದಿಗೆ ಅನುರಾಗವೇರ್ಪಟ್ಟ ಮೇಲೆ ಅಂತರ ಹೆಚ್ಚಿಸಿಕೊಂಡಿದ್ದ. ಇಂಥ ನಟ ಇಂದು ಫ್ರೀಡಂ ಪಾರ್ಕ್‌ನಲ್ಲಿ ಮೈಮರೆತಿದ್ದ, ಬಹಿರಂಗವಾಗಿದ್ದ. ಗೆಳೆಯರೆಲ್ಲರೂ ನಿಂದು ಒಳ್ಳೆ ಫೋಟೊ ಬಂದೈತೆ ಕಣಮ್ಮ ಎಂದು ಪ್ರಶಂಸಿಸುತ್ತಿರುವಾಗಲೂ... ನಟ ಅದರಿಂದಾಗಬಹುದಾದ ಎಡವಟ್ಟುಗಳನ್ನು ನೆನೆದು ದಿಗಿಲುಗೊಂಡಿದ್ದ. ಇದೇ ಚಿಂತೆಯಲ್ಲಿ ಮೆಟ್ಟಿಲು ಹತ್ತಿ ರೂಮಿಗೆ ಬಂದವನು ಮೊಬೈಲ್ ತೆಗೆದು ವಾಟ್ಸ್ಆ್ಯಪ್‌ಗೆ ಹೋದ. ಅಲ್ಲಿ ಲಲಿತಾಳ ಮೆಸೇಜ್ ಒಂದಿತ್ತು. ಕುತೂಹಲದಿಂದ ಅದರ ಮೇಲೆ ಒತ್ತಿದಾಗ ನಟನಿಗೆ ಕಂಡದ್ದು ಇಂದಿನ ಪತ್ರಿಕೆಯಲ್ಲಿ ರಿಮಾದಿ ಜಾತಿಯ ಬೃಹತ್ ಪ್ರತಿಭಟನೆಯಲ್ಲಿ ಅವನು ಭಾಗವಹಿಸಿರುವ ಚಿತ್ರ. ಅದರ ಕೆಳಗೆ ಗುಡ್ ಮಾರ್ನಿಂಗ್ ನಟ. ಹ್ಯಾವ್ ಎ ನೈಸ್ ಡೆ ಎಂದು ಬರೆದಿತ್ತು.

ತಡವರಿಸಿದ ನಟ ಧೈರ್ಯ ತಂದುಕೊಂಡು, ಇದಕ್ಕಾಗಿಯೇ ನಿನ್ನೆ ನಂದಿಬೆಟ್ಟಕ್ಕೆ ಬರಲಾಗಲಿಲ್ಲ 'ಸಾರಿ' ಎಂದ.

ಆ ಕಡೆಯಿಂದ ಲಲಿತಾ, 'ಅದಕ್ಕೆ ನನಗೆ ನೀ ಇಷ್ಟ ಕಣೊ' ಎಂದು ಬರೆದು ದೊಡ್ಡ ಹೃದಯದ ಸಿಂಬಲ್ ಜೊತೆಮಾಡಿ ಕಳುಹಿಸಿದಳು.

## ಗುರುಪ್ರಸಾದ್ ಕಂಟಲಗೆರೆ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನವರು. ವೃತ್ತಿಯಲ್ಲಿ ಶಿಕ್ಷಕ. ಕತೆ ಕವಿತೆ ಆಸಕ್ತಿಯ ಕ್ಷೇತ್ರಗಳು. ಪ್ರಕಟಿತ ಪುಸ್ತಕಗಳು: 'ಗೋವಿನ ಜಾಡು', 'ಕೆಂಡದ ಬೆಳುದಿಂಗಳು' (ಕಥಾಸಂಕಲನಗಳು), 'ಕಪ್ಪು ಕೋಣಗಳು' (ಕವನ ಸಂಕಲನ), 'ದಲಿತ ಸಾಂಸ್ಕೃತಿಕ ಕಥನಗಳ ಅಧ್ಯಯನ' (ಸಂಶೋಧನೆ). 2019ರ 'ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆ'ಯಲ್ಲಿ ಅವರ ಕತೆಗೆ ಮೊದಲ ಬಹುಮಾನ ಬಂದಿದೆ.